# ಕಲ್ಪನೆ – ವಾಸ್ತವದ ತಂತು ಎಚ್ಚರ

**ಆರತಿ ಪಿ. ಕುಲಕರ್ಣಿ**
ಉದಯದ 'ನಾನು ನನ್ನ ಕನಸು'ನ ರೇವತಿ



**◆ ಬೆಂಗಳೂರಿಗೆ ಬಂದಾಗ ಇದ್ದ ಉದ್ದೇಶ ಬದಲಾಗಿದ್ದು ಏಕೆ? ಬದಲಾದ ಬದುಕು ಹೇಗಿದೆ?**

ಸೀರಿಯಲ್ ಮಾಡಬೇಕು ಎಂದು ನಾನು ಬರಲಿಲ್ಲ. ಸುದ್ದಿ ವಾಚನಕ್ಕೆಂದು ಬಂದಿದ್ದೆ. ಆರು ವರ್ಷ ಅದನ್ನು ಮಾಡಿದೆ. ಒಮ್ಮೆ ಅಭಿನಯವನ್ನು ಮಾಡಿನೋಡೋಣ ಎಂದು ಅನ್ನಿಸಿ ಪ್ರಯತ್ನ ಮಾಡಿದೆ. ಅದೇ ಇಲ್ಲಿಯತನಕ ಕೈ ಹಿಡಿದು ನಡೆಸಿದೆ. ಮೊದಲು 'ಅರಗಿಣಿ'ಯಲ್ಲಿ ಅವಕಾಶ ಸಿಕ್ಕಿತು. ಅದಾದ ಮೇಲೆ 'ಗಂಗಾ' 'ದುರ್ಗಾ' ಹೀಗೆ ಏಳೆಂಟರಲ್ಲಿ ಪಾತ್ರ ಮಾಡಿ ಈಗ 'ನಾನು ನನ್ನ ಕನಸು'ನಲ್ಲಿ ಮಾಡುತ್ತಿದ್ದೇನೆ. ಇದುವರೆಗೆ ನಿರ್ವಹಿಸಿದ ಪಾತ್ರಕ್ಕಿಂತ ಭಿನ್ನವಾಗಿದೆ. ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೀತಾ ಇದೆ. ಬಾಂಬೆಯ ಪ್ರೊಡಕ್ಷನ್ ಸಂಸ್ಥೆ ಕನ್ನಡದಲ್ಲಿ ನಿರ್ಮಿಸುತ್ತಿದೆ. ಪ್ರಸ್ತುತ ಸಮಾಜದಲ್ಲಿ ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ವೈದ್ಯರನ್ನಾಗಿ ಮಾಡಬೇಕೆಂದು ಕನಸು ಹೊತ್ತಿರುತ್ತಾರೆ. ಈ ಕಥೆಯಲ್ಲಿ ನಮಗೂ ಅನು ಎಂಬ ಮಗಳಿದ್ದಾಳೆ. ಆಕೆಯನ್ನು ಡಾಕ್ಟರ್ ಮಾಡಬೇಕು ಎನ್ನುವುದು ನಮ್ಮ ಕನಸು. ದುರದೃಷ್ಟವಶಾತ್ ಪತಿ ತೀರಿ ಹೋಗುತ್ತಾರೆ. ಅವರ ಕನಸನ್ನು ಸಾಕಾರ ಮಾಡುವ ನಿಟ್ಟಿನಲ್ಲಿ ನಡೆಯುವ ಹೋರಾಟ ಗಾಥೆಯೇ ಕಥೆಯ ಹೂರಣ.

**◆ ವಾಸ್ತವದ ವಾರ್ತಾವಾಚನಕ್ಕೂ ಕಲ್ಪನೆಯ ಪಾತ್ರಾಭಿನಯಕ್ಕೂ ಕಂಡ ವ್ಯತ್ಯಾಸ ಏನು?**

ಅಲ್ಲಿ ವಾಸ್ತವನೇ ಹೇಳಬೇಕು ನಿಜ. ಲೈವ್ ಪ್ರಸಾರ ಆಗುತ್ತಿರುತ್ತದೆ. ಹೀಗಿದ್ದಾಗ ನೇರವಾಗಿ ಫೋನ್ ತೆಗೆದುಕೊಂಡರೂ ತಕ್ಷಣ ಸುದ್ದಿಗೆ ಸಂಬಂಧಿಸಿದಂತೆ ಅಪ್‌ಡೇಟ್ ಮಾತುಕತೆ ನಡೆಸಬೇಕು. ಯಾವುದೋ ವಿಷಯದ ಬಗ್ಗೆ ಚರ್ಚೆ ಮಾಡಬೇಕು ಅಂದರೆ ಅದಕ್ಕೂ ಸಿದ್ಧವಾಗಬೇಕು. ಒಟ್ಟಾರೆ ಮೈಯಲ್ಲಾ ಕಣ್ಣಾಗಿರಬೇಕು ಅನ್ನುತ್ತಾರಲ್ಲ ಹಾಗೆ. ವಾರ್ತಾವಾಚಕಿಯಾಗಿ ತುಂಬ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಕೆಲಸದ ಒತ್ತಡ ತುಂಬಾನೇ ಹೆಚ್ಚಿರುತ್ತದೆ. ಅಲ್ಲಿ ಹೇಗೆ ಎಚ್ಚರಿಕೆ ಇರಬೇಕೋ ಹಾಗೆಯೇ ಬಣ್ಣದ ಜಗತ್ತಿನಲ್ಲಿಯೂ ಬೇರೆಯ ರೀತಿಯ ಎಚ್ಚರಿಕೆ ತೆಗೆದುಕೊಳ್ಳಬೇಕು. ಒಂದು ಪಾತ್ರವನ್ನು ನಾವು ನಿರ್ವಹಿಸುತ್ತಿದ್ದೇವೆ ಅಂದರೆ, ಪಾತ್ರಕ್ಕೆ ಬೇಕಾಗುವ ಭಾವಗಳ ಮಿಡಿತವನ್ನು ನೀಡಬೇಕು. ವರದಿಯನ್ನು ಜನರಿಗೆ ಒಪ್ಪಿಸುವಾಗ ಇರುವ ಎಚ್ಚರಿಕೆ ಬೇರೆ. ಒಂದು ಪಾತ್ರವನ್ನು ಜನರ ಮನಸ್ಸಿಗೆ ತಟ್ಟುವಂತೆ ಮಾಡುವಾಗ ತೆಗೆದುಕೊಳ್ಳುವ ಎಚ್ಚರ ಬೇರೆ. ಭಾವಶೂನ್ಯವಾದರೆ, ಸುಮ್ಮನೆ ಹೇಗೋ ಮಾಡಿದರೆ ಇವಳು ಬರುತ್ತಾಳೆ ಹೋಗುತ್ತಾಳೆ ಎಂದೇ ಭಾವಿಸುತ್ತಾರೆ. ಜನರು ಒಪ್ಪುವಂತೆ ಮಾಡಬೇಕು ಎಂದರೆ ಎಚ್ಚರದಿಂದ ನಿಭಾಯಿಸಬೇಕು.

**◆ ಆರತಿಯಾದ ನೀವು ರೇವತಿ ಎಂದಾಗುತ್ತೀರಿ ಈ ಬಗ್ಗೆ ಏನೆನಿಸುತ್ತದೆ?**

ಈ ಹಿಂದೆ ಅರಗಿಣಿಯಲ್ಲಿ 'ಅಕ್ಷರಾ' ಪಾತ್ರವನ್ನು ಮಾಡಿದ್ದೆ. ಆಗ ನನ್ನನ್ನು ಅಕ್ಷರಾ ಎಂದೇ ಗುರುತಿಸುತ್ತಿದ್ದರು. ಅದು ಖುಷಿ ಕೊಡ್ತಾ ಇತ್ತು. ಇನ್ನೂ ನನ್ನನ್ನು ರೇವತಿ ಎಂದು ಗುರುತಿಸಿಲ್ಲ. ಈಗಷ್ಟೇ ಧಾರಾವಾಹಿ ಆರಂಭವಾಗಿದೆ. ವೀಕ್ಷಕರ ಮನಸ್ಸಿಗೆ ಇನ್ನೂ ರೇವತಿ ಸೋಂಕಿಲ್ಲ ಎಂದುಕೊಳ್ಳುತ್ತೇನೆ. ಆದಷ್ಟು ಬೇಗ ಆಕೆ ಪರಿಚಯವಾಗಿ ನನ್ನನ್ನು ರೇವತಿ ಎಂದು ಕರೆಯಲಿ ಎಂದು ಕಾಯುತ್ತಿದ್ದೇನೆ. ಬೇಗ ರೇವತಿ ನಡೆದುಕೊಂಡು ಹೋಗಿ ಜನರ ಮನದ ಬಾಗಿಲನ್ನು ತೆರೆಯಲಿ ಎಂದುಕೊಳ್ಳುತ್ತೇನೆ. ಬಣ್ಣ ಹಚ್ಚಿದ ಮೇಲೆ ನನ್ನ ಹೆಸರನ್ನೇ ಮರೆತಿದ್ದೇನೆ.

**◆ ಅಭಿನಯವನ್ನು ಹೇಗೆ ರೂಢಿ ಮಾಡಿಕೊಂಡಿದ್ದೀರಿ?**

ನ್ಯೂಸ್ ಆ್ಯಂಕರ್ ಆದ ನಾನು ನಟನೆಯನ್ನು ಆರಂಭಿಸಿದಾಗ ಡೈಲಾಗ್ ವರದಿಯಂತೆ ಒಪ್ಪಿಸುತ್ತಿದ್ದೇನೆ ಎನ್ನುವ ಮಾತನ್ನು ಕೇಳಿದ್ದೆ. ಅದನ್ನು ಬದಲಿಸಿಕೊಳ್ಳುವಂತೆ ಹೇಳುತ್ತಿದ್ದರು. ಅಭಿನಯ ಹೇಗೆ ಬಂತು ಅನ್ನೋದು ಗೊತ್ತಿಲ್ಲ. ಇದನ್ನು ಮಾಡಲೇಬೇಕು ಎನ್ನುವ ಆಸೆ ಇದ್ದ ಕಾರಣ ಸ್ವಯಂ ಆಸಕ್ತಿಯಿಂದ ಹೋಗಿದ್ದೆ. ಆ ಬಗ್ಗೆ ಯಾವುದೇ ಔಪಚಾರಿಕ ಶಿಕ್ಷಣವನ್ನು ಪಡೆಯಲಿಲ್ಲ. ಧಾರಾವಾಹಿಗೆ ಪ್ರವೇಶ ಮಾಡಿದ ನಂತರವೇ ಆಸಕ್ತಿಯಿಂದ ಕಲಿಯುತ್ತಾ ಕಲಿಯುತ್ತಾ ಸಾಗುತ್ತಿದ್ದೇನೆ.

ಮನೆಯ ಬೆಂಬಲ ಚೆನ್ನಾಗಿದೆ. ಮೂರನೇ ತರಗತಿಯಲ್ಲಿ ಓದುವ ಮಗ ಇದ್ದಾನೆ. ಅವನು ಹುಬ್ಬಳ್ಳಿಯಲ್ಲಿ ಓದುತ್ತಿದ್ದಾನೆ. ಅಪ್ಪ– ಅಮ್ಮ, ಅತ್ತೆ– ಮಾವ ಅವರ ಬೆಂಬಲ ಸ್ಮರಣೀಯ. ನನ್ನ ಪತಿ ಪವನ್ ಕುಲಕರ್ಣಿ ಸ್ವಂತ ಬಿಜಿನೆಸ್ ಮಾಡುತ್ತಾರೆ. ಅವರು ನಾನು ಮನೆಯಲ್ಲಿ ಇರದಿದ್ದರೆ ಅವರೇ ನನ್ನ ಪಾತ್ರವನ್ನು ಮನೆಯಲ್ಲಿ ನಿರ್ವಹಿಸುತ್ತಾರೆ. ಅದು ನನ್ನ ಕೊರತೆಯನ್ನು ಸರಿದೂಗಿಸುತ್ತದೆ. ಎಲ್ಲಾದರೂ ಹೊರಸಂಚಾರಕ್ಕೆ ನಮ್ಮ ಕುಟುಂಬದವರು ಹೋದಾಗ ನನ್ನನ್ನು ಯಾರಾದರೂ ಗುರುತಿಸಿ ಸೆಲ್ಫಿ ಫೋಟೊ ತೆಗೆದುಕೊಳ್ಳುವ ಅಭಿಮಾನ ನಮ್ಮ ಮನೆಯವರಿಗೆಲ್ಲ ಖುಷಿಯನ್ನು ಕೊಡುತ್ತದೆ.

**◆ ಮುಂದಿನ ಪಾತ್ರ ಹೇಗಿರಬೇಕು ಎಂದು ಬಯಸುತ್ತೀರಿ?**

ಭಿನ್ನ ಪಾತ್ರಗಳನ್ನು ಮಾಡಿದ್ದರೂ ಎಲ್ಲ ಸದ್ಗುಣಗಳ ಪಾತ್ರಗಳನ್ನೇ ಮಾಡಿದ್ದೇನೆ ಎಂದೆನಿಸುತ್ತದೆ. ನೆಗೆಟಿವ್ ಪಾತ್ರವನ್ನೂ ಮಾಡಬೇಕು ಎನ್ನುವ ಆಸೆ ನನ್ನದು. ಅದು ಕೂಡ ಭಿನ್ನ ಅನುಭವವನ್ನು ನೀಡುತ್ತದೆ. ಈವರೆಗಿನ ಧಾರಾವಾಹಿ– ಸಿನಿಮಾಗಳ ಎಲ್ಲ ಪಾತ್ರಗಳೂ ಪಾಸಿಟಿವ್ ಗುಣದಿಂದಲೇ ಕೂಡಿವೆ. 'ಗೋಕುಲದಲ್ಲಿ ಸೀತೆ'ಯ ಪಾತ್ರ ಸ್ವಲ್ಪ ನೆಗೆಟಿವ್ ಶೇಡ್ ಇತ್ತು, ಆದರೆ ಅಂತಿಮವಾಗಿ ಅದು ಹಾಗಿರಲಿಲ್ಲ. ಈಗ 'ಜಂಟಲ್ ಮನ್' ಸಿನಿಮಾದಲ್ಲಿ ಅತ್ತಿಗೆ ಪಾತ್ರ ಮಾಡಿದ್ದೇನೆ. ಅದು ಕೂಡ 'ಜಂಟಲ್ ವುಮೆನ್' ರೀತಿ ಇದೆ.

■ **ರಾಘವೇಂದ್ರ ಕೆ.**